ಓ. ಎಸ್. ಸಂಖ್ಯೆ : 52–2012
ಪಿ . ಡಬ್ಲ್ಯೂ. : 1

ಸಾಕ್ಷಿಯನ್ನು ದಿನಾಂಕ : 01–04–2022 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲು ಪ್ರತಿವಾದಿ 9 ಮತ್ತು 10 ರ ಪರ ಶ್ರೀ ಎಸ ವಿ ಎಸ ವಕೀಲರಿಂದಃ

1. ನಾನು ಕ್ರಿಶ್ಚನ ದರ್ಮಕ್ಕೆ ಸೇರಿದವಳಾಗಿದ್ದೆನೆ. ನನ್ನ ಅಜ್ಜನ ಹೆಸರು ಬಂಡೆಪ್ಪಾ ಬಂಡೆಪ್ಪಾರವರಿಗೆ 3 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು. ಅವರ ಹೆಸರು ಗಣಪತಿರಾವ, ಸಾಂಬಾಜಿರಾವ, ಪುಂಡಲಿಕಾ ಹಾಗೂ ಗಂಗಮ್ಮಾ ಹಾಗೂ ಕಲ್ಲಮ್ಮಾ ನನ್ನ ಅಜ್ಜ ಬಂಡೆಪ್ಪರವರ ನಾನು ಹುಟ್ಟುವ ಪೂರ್ವದಲ್ಲಿ ತೀರಿಕೊಂಡಿದ್ದಾರೆ. ಬಂಡೆಪ್ಪಾರವರಿಗೆ ಎಷ್ಟು ಅಸ್ತಿ ಇತ್ತು ಎಂದು ಹೇಳಲು ನನಗೆ ಗೊತ್ತಿಲ್ಲಾ. ಗಣಪತಿರವರಿಗೆ 3 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು.ಅವರ ಹೆಸರು ದೀಪಕ, ಅನುಪ ಹಾಗೂ ಜೊಯಲ್. ಮದುತಲಾ ಹಾಗೂ ಮಂಜುಲತಾ. ಈ ದಾವೆ ಸಲ್ಲಿಸುವಾಗ ಗಣಪತಿರವರ ಮಕ್ಕಳನ್ನು ಪಾರ್ಟಿ ಮಾಡಿರಲಿಲ್ಲಾ ಅಂದರೆ ನಿಜ. ನನ್ನ ತಂದೆಗೆ ಬಂಡಪ್ಪಾರವರಿಗಂದ ಯಾವುದೇ ಅಸ್ತಿ ಬಂದಿರಲ್ಲಾ ಅಸ್ತಿಗಳಲ್ಲಿ ಹಂಚಿಕೆ ಆಗಿಲ್ಲಾ. ಗಣಪತಿರವರಿಗೂ ಯಾವುದೇ ಅಸ್ತಿ ಬಂದಿಲ್ಲಾ.

2. ದಾವ ಅಸ್ತಿ ಸರ್ವೆ ನಂ 3 ಹಾಗೂ ಅದು ಮಿರ್ಜಾಪೂರದಲ್ಲಿ ಇದೆ. ಅದರ ಒಟ್ಟು ವಿಸ್ತಿರ್ಣ 28 ಎಕರೆ ಇದ್ದು ಅದರಲ್ಲಿ 5 ಎಕರೆ ಜಮೀನು ಸರಕಾರದವರು ಪಡೆದಿದ್ದಾರೆ. ದಾವಾ ಅಸ್ತಿಯ ದಕ್ಷಿಣಕ್ಕೆ ಮಲಕಾಪೂರೆ ರಸ್ತೆ, ಉತ್ತರಕ್ಕೆ ಅಷ್ಟೂರ ನಾಲೆ, ಪೂರ್ವದಲ್ಲಿ ಸರ್ವೆ ನಂ 7, ಪಶ್ಚಿಮಕ್ಕೆ ಇರವ ಅಸ್ತಿ ನನಗೆ ಗೊತ್ತಿಲ್ಲಾ. 1973–74 ರಲ್ಲಿ ದಾವಾ ಅಸ್ತಿ ಟೆನೆಸ್ಸಿಯಲ್ಲಿ ಬಂದಿದೆ. ನನ್ನ ತಂದೆ ಲ್ಯಾಂಡ ಟ್ರಿಬುನಲನಲ್ಲಿ ಅರ್ಜಿ ಕೊಟ್ಟಿರಲಿಲ್ಲಾ ನನ್ನ ಕಾಕ ಗಣಪತರಾವರವರೆ ಒಟ್ಟು ಕುಟುಂಬದ ಪರವಾಗಿ ಅರ್ಜಿ ಸಲ್ಲಿಸಿದ್ದರು. ದಾವಾ ಅಸ್ತಿ ಗಣಪತರಾವರವರ

ಬಂದಿರುವ ಅಸ್ತಿ ಅಂದರೆ ಸರಿಯಲ್ಲ. ದಾವಾ ಅಸ್ತಿಯಲ್ಲಿ ಸುಮಾರು 11 ಮತ್ತು 12 ಎಕರೆ ಜಮೀನು ಪ್ರತಿವಾದಿ 4 ಮತ್ತು 5 ರವರಿಗೆ ಮಾರಾಟ ಮಾಡಲಾಗಿದೆ. ಸರಕಾರದವರು ಕೊಟ್ಟಿರುವ ಪರಿಹಾರದ ಹಣದಲ್ಲಿ ನಮಗೆ ಯಾವುದೇ ಹಣ ಕೊಟ್ಟಿಲ್ಲಾ. ಪ್ರತಿವಾದಿ 1 ರವರ ಮಗ ಜೊಯಲ್‌ರವರ ಹೆಂಡತಿ ಪ್ರತಿವಾದಿ 9 ಅಂದರೆ ನಿಜ. ನನಗೆ ದಾವಾ ಅಸ್ತಿಯಲ್ಲಿ ಯಾವುದೇ ಭಾಗ ಇಲ್ಲಾ ಅಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

ಪ್ರ.ಹಿ ಸಿವಿಲ್ ಜಡ್ಜ & ಸಿ. ಜೆ.ಎಮ್
ನ್ಯಾಯಾಧೀಶರು, ಬೀದರ್.